ಓ.ಎಸ್ ನಂಃ *304* /2022

ಪಿ .ಡಬ್ಲು-*2*

ಸಾಕ್ಷಿಯನ್ನು ದಿನಾಂಕಃ 06.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಸಿ ಎಸ್ ವಕೀಲರಿಂದ**

ಈ ದಾವವನ್ನು ವಾದಿ ಹಾಕಿರುತ್ತಾರೆ. ಯಾರ ವಿರುದ್ದ ಹಾಕಿರುತ್ತಾರೆ ಎಂದರೆ ಸುಬ್ರಮಣಿ ರವರ ವಿರುದ್ಧ ಹಾಕಿರುತ್ತಾರೆ. ಏನು ಪರಿಹಾರ ಕೋರಿ ದಾವಾ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಸರ್ವೆ ನಂ 125/1 ರ ಮೇಲೆ ಹಾಕಿರುತ್ತಾರೆ. ಸರ್ವೆ ನಂ 125/1 ಮೂಲತಃ ಯಾರಿಗೆ ಸೇರಿರುತ್ತದೆ ಎಂದರೆ ಕೆ ಟಿ ರಾಮಣ್ಣ ರವರದ್ದಾಗಿದ್ದು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಕೆ ಟಿ ರಾಮಣ್ಣನವರನ್ನು ನೋಡಿರುತ್ತೇನೆ. ಅವರಿಗೆ ಇಬ್ಬರು ಮಕ್ಕಳು ಅವರು ನಾರಾಯಣಪ್ಪ ಮತ್ತು ಸೀನಪ್ಪ. ಸದರಿ ಸೀನಪ್ಪನವರ ಹೆಂಡತಿಯೇ ಪ್ರತಿವಾದಿ ಎಂದರೆ ಸರಿ . ದಾವಾ ಆಸ್ತಿ ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ ಸರಿ . ದಾವಾ ಆಸ್ತಿ ನಡುವೆ ವಾದಿ ಮತ್ತು ಪ್ರತಿವಾದಿಯ ನಡುವೆ ಏನು ವ್ಯವಹಾರ ನಡೆದಿರುತ್ತದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ದಾಖಲೆಯನ್ನು ನೋಡಿರುತ್ತೀರಾ ಎಂದರೆ ಇಲ್ಲ. ಈ ದಾವಾ ಹೂಡುವ ಮೊದಲೇ ವಾದಿ ಹಾಗೂ ಇತರರ ವಿರುದ್ದ ಪ್ರತಿವಾದಿ ದಾವೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಆ ದಾವೆ ಹಾಕಿದ ನಂತರ ಅಸ್ತಿ ಬಿಟ್ಟುಕೊಡಬೇಕೆಂದು ಮತ್ತು ತೊಂದರೆ ನೀಡಬೇಕೆಂದು ಸುಳ್ಳು ದಾವೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**